**CC 5125/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್ 5125/2023**

**ಸಿ ಡಬ್ಲೂ 18**
**ಪಿ ಡಬ್ಲೂಃ 11**

**ಸಾಕ್ಷಿಯ ಹೆಸರು - ಶಂಭುಲಿಂಗ ಹಿರೇಮಠ**
**ತಂದೆಯ ಹೆಸರು - ಚಂದ್ರಶೇಖರಯ್ಯ**
**ವಯಸ್ಸು - 33 ವರ್ಷಗಳು**
**ಉದ್ಯೋಗ - ಪಿ ಎಸ್ ಐ, ಹರಪನಹಳ್ಳಿ**
**ವಾಸಸ್ಥಳ - ಹರಪನಹಳ್ಳಿ**

**ಸಾಕ್ಷಿ ಈ ದಿನ ನ್ಯಾಯಾಲಯದಿಂದ ಅಧಿಕೃತವಾಗಿ ನೀಡಿರುವ** jitsimeet link **ನ್ನು ಉಪಯೋಗಿಸಿ ವಿಡಿಯೋ ಕಾನ್ಸಫರೆನ್ಸಂಗ್ ನಲ್ಲಿ ಹಾಜರು ಇರುತ್ತಾರೆ.**

**ಸಾಕ್ಷಿಯನ್ನು ದಿನಾಂಕಃ 19-02-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು **18-10-2022** ರಿಂದ **26-07-2023** ರವರೆಗೆ ಕಮಲಾಪುರ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **27-06-2023** ರಂದು ಡಿ.ವಾಯ ಎಸ್ ಪಿ ಹೊಸಪೇಟೆಯ ಆದೇಶದ ಮೇರಗೆಗೆ ಪ್ರಕರಣದ ತನಿಖೆಯನ್ನು ವಹಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ **-1** ರವರ ಮರುಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ **-6** ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ **-7** ರಿಂದ **14** ಮತ್ತು **16** ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿಃ **03-07-2023** ರಂದು ಇನ್ವೆಂಟರಿ ದೃಡೀಕರಣಕ್ಕಾಗಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತೇನೆ. ಅದೇ ದಿನ ಇನ್ವೆಂಟರಿ ಪಂಚನಾಮೆಗಾಗಿ ಚಾಸಾ **-4** ಮತ್ತು

5 ರವರಿಗೆ ನೋಟಿಸ್ ನೀಡಿ ಕರೆಸಿಕೊಂಡಿರುತ್ತೇನೆ. ಅದೇ ದಿನ ಚಾಸಾ -16 ರವರಿಗೆ ಇನ್ವೆಂಟರಿ ಸಮಯದಲ್ಲಿ ಹಾಜರಿರಲು ನೋಟಿಸ್ ಜಾರಿ ಮಾಡಿರುತ್ತೇನೆ. ಅದೇ ದಿನ ನ್ಯಾಯಾಧೀಶರ ಮುಂದೆ ಇನ್ವೆಂಟರಿ ಪಂಚನಾವೆಯನ್ನು ಮಾಡಿ ದೃಡೀಕರಣ ಪತ್ರ ಪಡೆದಿರುತ್ತೇನೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಪಿಃ 8 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 8(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಇನ್ವೆಂಟರಿ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 9 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 9(ಎ) ಎಂದು ಗುರುತಿಸಲಾಯಿತು.

ದಿಃ 07-07-2023 ರಂದು ಮಾದರಿ ಗಾಂಜಾವನ್ನು ಕಲಬುರ್ಗಿಯ ರಾಸಾಯನಿಕ ಪ್ರಯೋಗಾಲಯಕ್ಕೆ ಚಾಸಾ - 17 ರವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ದಿಃ 26-07-2023 ರಂದು ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ -19 ರವರು ವಹಿಸಿಕೊಂಡಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ.ಎಲ್.ಎಸ್.ಕೆ ವಕೀಲರಿಂದ</u>**

ಸಾಕ್ಷಿದಾರರ ಹೇಳಿಕೆಗಳನ್ನು ಯಾವ ಸಮಯಕ್ಕೆ ಮತ್ತು ಎಷ್ಟು ಗಂಟೆಗಳ ಕಾಲ ಮಾಡಿಕೊಂಡಿರುತ್ತೇನೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು 1 ಗಂಟೆ ಕಾಲ ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ -7 ರಿಂದ 14 ರವರು ಪ್ರತ್ಯೇಕವಾಗಿ ತಾವುಗಳೆಲ್ಲರೂ ಚಾಸಾ -2, 3 ಮತ್ತು 6 ರವರಿಗೆ ನೋಟಿಸ್ ನೀಡಿರುವುದಾಗಿ ತಮ್ಮ ಹೇಳಿಕೆಗಳಲ್ಲಿ ನುಡಿದಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಹೇಳಿಕೆಗಳೆಲ್ಲಾ ಕಾಪಿ ಪೇಸ್ಟ್ ವಿಧಾನದಿಂದ ತಯಾರಿಸಿರುತ್ತೇವೆ ಅಂದರೆ ಸರಿಯಲ್ಲ. ಚಾಸಾ -4 ಮತ್ತು 5 ರವರಿಗೆ ಯಾವ ಸಿಬ್ಬಂದಿ ನೋಟಿಸ್ ತಲುಪಿಸಿರುತ್ತಾರೆ ಎಂದು ನನಗೆ ನೆನಪಿಲ್ಲ. ಸದರಿ ನೋಟಿಸ್ ನಲ್ಲಿ ನೋಟಿಸ್ ಜಾರಿ ಆದ ಸಮಯ ನಮೂದು ಆಗಿಲ್ಲ ಅಂದರೆ ಸರಿ.

ಡಿ.ವಾಯ್.ಎಸ್.ಪಿ ರವರು ಪ್ರಕಣದ ತನಿಖೆ ವಹಿಸಿಕೊಳ್ಳಲು ಹೊರಡಿಸಿದ ಆದೇಶ ನಾನು ಯಾವಾಗ ಸ್ವೀಕರಿಸಿರುತ್ತೇನೆ ಎಂದು ಸಮಯ ನಮೂದು ಮಾಡಿಲ್ಲ ಅಂದರೆ ಸರಿ. ಇನ್ವೆಂಟರಿ ಆಗುವವರೆಗೂ ಮುದ್ದೆಮಾಲು ಯಾರ ಬಳಿ ಇತ್ತು ಎಂದು ಹೇಳಿಕೆಯನ್ನು ಪಡೆದಿರುವುದಿಲ್ಲ ಅಂದರೆ ಸರಿ. ಇನ್ವೆಂಟರಿ ಪಂಚನಾಮೆ ಯಲ್ಲಿ ಗಾಂಜಾ ಎಲೆ ಮತ್ತು ಹೂ ಎಂದು ಬರೆಯಲಾಗಿದೆ ಅಂದರೆ ಸರಿ. ಇನ್ವೆಂಟರಿ ಪಂಚನಾವೆಯಲ್ಲಿ ಪಂಚರ ಹೇಳಿಕೆಗಳನ್ನು ಪಡೆದಿಲ್ಲ ಅಂದರೆ ಸರಿ.

ನಾನು ಯಾವುದೇ ಮರುಹೇಳಿಕೆ ಮತ್ತು ಹೇಳಿಕೆಗಳನ್ನು ಪಡೆದಿಲ್ಲ ಅಂದರೆ ಸರಿಯಲ್ಲ. ಸದರಿ ಹೇಳಿಕೆಗಳನ್ನು ಕಾಪಿ ಪೇಸ್ಟ್ ವಿಧಾನದಿಂದ ತಯಾರಿಸಿರುತ್ತೇನೆ ಅಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಕಡತಕ್ಕೆ ಅಳವಡಿಸಿರುತ್ತೇನೆ ಅಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.